ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ
ಚಾವಿಸನಿನಿ ಸಹಾಯಕ ಕಾರ್ಯನಿರ್ವಾಹಕ
ಇಂಜಿನಿಯರ್ ಕಛೇರಿ, ಉಪವಿಭಾಗ ಪಾಂಡವಪುರ
Telephone No: 08236-255110
E-mail ID: aceppura@gmail.com

CHAMUNDESHWARI ELECTRICITY
SUPPLY CORPORATION LIMITED
(A Government of Karnataka Undertaking)
Assistant Executive Engineer
CESC Pandavapura Sub-dvn
Web Site:www.cescmysore.org.
Company Identity Number [CIN]:-U40109KA2004SGC035177

ಸಂಖ್ಯೆ:-ಸಕಾನಿಇಂ(ವಿ)/ಸ.ಇಂ(ತಾ)/ಸೆಸ್ಕ್/ಪಾ.ಪುರ/20-21/ 1500-1513 ದಿನಾಂಕ: 09/09/2021

ದಿನಾಂಕ:28-08-2021ರ ಶನಿವಾರದಂದು ಪಾಂಡವಪುರ ಉಪವಿಭಾಗದಲ್ಲಿ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಸೆಸ್ಕ್ ಪಾಂಡವಪುರ ವಿಭಾಗ ರವರ ಅಧ್ಯಕ್ಷತೆಯಲ್ಲಿ, ನಡೆದ ಜನಸಂಪರ್ಕ ಸಭೆಯ ಹಾಜರಾತಿ ಹಾಗೂ ನಡವಳಿಗಳು.

**ಹಾಜರಿದ್ದ ಅಧಿಕಾರಿಗಳು / ನೌಕರರು**

**ಶ್ರೀಯುತ /ಶ್ರೀಮತಿ:**

1. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಪಾಂಡವಪುರ ವಿಭಾಗ.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಪಾಂಡವಪುರ ಉಪವಿಭಾಗ.
3. ಶ್ರೀಮತಿ ರೂಪಿಣಿ ಎಂ.ಎನ್, ಸಹಾಯಕ ಇಂಜಿನಿಯರ್(ತಾ), ಪಾಂಡವಪುರ ಉಪವಿಭಾಗ.
4. ಶ್ರೀ ವಿ.ಕೃಷ್ಣಮೂರ್ತಿ, ಪ್ರ.ಸಹಾಯಕ ಇಂಜಿನಿಯರ್(ವಿ), ಟಿ.ಎಸ್.ಛತ್ರ ಶಾಖೆ.
5. ಶ್ರೀ ಬಿ ನಂದೀಶ್, ಕಿರಿಯ ಇಂಜಿನಿಯರ್(ವಿ), ಬನ್ನಂಗಾಡಿ ಶಾಖೆ.
6. ಶ್ರೀ ನಟರಾಜು, ಪ್ರ.ಸಹಾಯಕ ಇಂಜಿನಿಯರ್(ವಿ), ಮೇಲುಕೋಟೆ ಶಾಖೆ.
7. ಶ್ರೀ ಬಿ.ಮೂರ್ತಿ, ಮೇಲ್ವಿಚಾರಕ, ಚಿನಕುರಳಿ ಶಾಖೆ.
8. ಶ್ರೀ ಪಾಂಡುರಂಗ ಹೆಚ್.ಸಿ, ಸಹಾಯಕ ಇಂಜಿನಿಯರ್(ವಿ), ಪಟ್ಟಣ ಶಾಖೆ.
9. ಶ್ರೀ ಚೆಲುವರಾಜು ಎಂ.ಬಿ. ಕಿರಿಯ ಇಂಜಿನಿಯರ್(ವಿ), ಕ್ಯಾತನಹಳ್ಳಿ ಶಾಖೆ.
10. ಶ್ರೀ ಸತೀಶ್.ಕೆ ಆಂತರಿಕ ಲೆಕ್ಕಪರಿಶೋಧನೆ, ಪಾಂಡವಪುರ ವಿಭಾಗ.
11. ಶ್ರೀ ಸತೀಶ್.ಜಿ.ಎಸ್, ಸಹಾಯಕ ಇಂಜಿನಿಯರ್(ವಿ), ಮೇಲುಕೋಟೆ ಶಾಖೆ.

**1. ಶ್ರೀ ಎಂ.ಜಿ.ಮರಿಸ್ವಾಮಿ ಮಾಣಿಕ್ಯನಹಳ್ಳಿ ಗ್ರಾಮ, ಮೊ.ಸಂ:9353888138**

**ದೂರು:-** (1) 100 ಕೆ.ವಿ.ಎ ಪರಿವರ್ತಕವು ಸುಟ್ಟು ಹೋಗಿದ್ದು ಇನ್ನೂ ಬದಲಾಯಿಸಿರುವುದಿಲ್ಲದರ ಬಗ್ಗೆ.
(2) ವಿದ್ಯುತ್ ಬಿಲ್‌ನಲ್ಲಿ ವಿವರಗಳು ಸರಿಯಾಗಿ ಕಾಣಿಸಿರುತ್ತಿರುವುದಿಲ್ಲ, ಇದರಿಂದಾಗಿ ಗ್ರಾಹಕರಿಗೆ



Scanned by TapScanner

ತೊಂದರೆಯಾಗುತ್ತಿರುವ ಬಗ್ಗೆ.

(3) ASD ಮೊತ್ತವನ್ನು ಏಕೆ ಕಟ್ಟಬೇಕೆಂದು ಸಭೆಯಲ್ಲಿ ಪ್ರಶ್ನಿಸಿದ್ದರು.

ಕ್ರಮ:- 1) ಈಗಾಗಲೇ ಸದರಿ ಟಿ.ಸಿ ಯನ್ನು ಬದಲಾಯಿಸಲಾಗಿದೆ ಇನ್ನೂ ಮುಂದೆ ವಿಫಲವಾದ ಪರಿವರ್ತಕವನ್ನು ಗ್ರಾಮೀಣ ಪ್ರದೇಶವಾಗಲಿ ಅಥವಾ ಪಟ್ಟಣವಾಗಲಿ 24 ಗಂಟೆಯೊಳಗೆ ಬದಲಾಯಿಸಲಾಗುವುದೆಂದು ಸಭಾಧ್ಯಕ್ಷರು ತಿಳಿಸಿದರು.

2) ಪ್ರಸ್ತುತ M/S BCITS ಅವರು ಟಿ.ಆರ್.ಎಂ ತಂತ್ರಾಂಶವನ್ನು ನಿರ್ವಹಿಸುತ್ತಿದ್ದು ಅವರ ಬಿಲ್‌ನಲ್ಲಿ ಈ ರೀತಿಯ ಲೋಪವಿರುವುದು ಕಂಡುಬಂದಿರುತ್ತದೆ. ಇದನ್ನು ಸರಿಪಡಿಸುವ ಸಲುವಾಗಿ ದಿ:01/09/2021ರಿಂದ M/S Idea infinity agency ರವರು ಕಾರ್ಯನಿರ್ವಹಿಸುವುದರಿಂದ ಈ ತರಹದ ದೋಷವು ಮರುಕಳಿಸುವುದಿಲ್ಲವೆಂದು ಸಭಾಧ್ಯಕ್ಷರು ತಿಳಿಸಿದರು.

3) ASD ಮೊತ್ತದ ವಿಚಾರವಾಗಿ, ನಿಮ್ಮ ತಿಂಗಳ ಬಳಕೆಯ 2 ಪಟ್ಟು ಠೇವಣಿ ನಮ್ಮಲ್ಲಿ ಇರಬೇಕಾಗಿರುತ್ತದೆ. ತಾವು ಈಗಾಗಲೇ ಕಟ್ಟಿರುವ ಠೇವಣಿ ಮೊತ್ತವು ಸದರಿ ಮೊತ್ತಕ್ಕೆ ಹೊಂದಾಣಿಕೆಯಾಗದಿದ್ದಲ್ಲಿ, ಆ ವ್ಯತ್ಯಾಸದ ಮೊತ್ತವನ್ನು ತಮ್ಮಿಂದ ವಸೂಲಿ ಮಾಡಲಾಗುವುದೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಗ್ರಾಹಕರಿಗೆ ವಿವರಿಸಿದರು.

2. ಶ್ರೀ ಬಲರಾಮು, ಪಾಂಡವಪುರ ಟೌನ್, ಮೊ.ಸಂಖ್ಯೆ:9900375242

ದೂರು:- ಪಟ್ಟಣದಲ್ಲಿ ಆಗಾಗ್ಗೆ ವಿದ್ಯುತ್ ವ್ಯತ್ಯಯವಾಗುತ್ತಿರುವ ಬಗ್ಗೆ.

ಕ್ರಮ:- ಸಭಾಧ್ಯಕ್ಷರು ಸಹಾಯಕ ಇಂಜಿನಿಯರ್(ವಿ) ಗಳಾದ ಟಿ.ಎಸ್.ಛತ್ರ ಮತ್ತು ಪಟ್ಟಣ ಶಾಖೆಯವರಿಗೆ ಇನ್ನೂ ಮುಂದೆ ಅಡಚಣೆರಹಿತ ವಿದ್ಯುತ್ ನೀಡುವಂತೆ ತಾಕೀತು ಮಾಡುವುದರ ಜೊತೆಗೆ ಪಟ್ಟಣದ ಹೊರಭಾಗದಲ್ಲಿ ಮಾರ್ಗದೋಷಗಳ ತೊಂದರೆ ಸರಿಪಡಿಸುವ ವೇಳೆಯಲ್ಲಿ ಪಟ್ಟಣದ ಫೀಡರನ್ನು ಮಾರ್ಗ ಮುಕ್ತಪಡೆಯದೇ, ಹೊರಭಾಗದ ಜಿ.ಓ.ಎಸ್ ಗಳನ್ನು ಓಪನ್ ಮಾಡಿಕೊಂಡು ಸಿಬ್ಬಂದಿಗಳನ್ನು ಅಲ್ಲಿ ಕೂರಿಸಿ ಕೆಲಸ ಮಾಡುವ ಸ್ಥಳಗಳಲ್ಲಿ ಸೇಫ್‌ಜೋನ್ ಸೃಷ್ಟಿಸಿ ಸುರಕ್ಷತಾ ನಿಯಮಗಳನ್ನು ಪಾಲಿಸಿಕೊಂಡು ಕೆಲಸ ನಿರ್ವಹಿಸಿರೆಂದು ಸೂಚಿಸಿದರು.



Scanned by TapScanner

**3. ಶ್ರೀ ದೊಡ್ಡಕರೀಗೌಡ ಚೀಕನಹಳ್ಳಿ ಗ್ರಾಮ , ಮೊ.ಸಂಖ್ಯೆ:9164914347**

**ದೂರು**:- ನಮ್ಮ ಜಮೀನಿನಲ್ಲಿರುವ ವಿದ್ಯುತ್ ಕಂಬಗಳು ದೂರಕ್ಕೆ ಹಾಕಿದು, ಮಧ್ಯದಲ್ಲಿ ತಂತಿಗಳು ಕೈಗೆ ಎಟಕುತ್ತವೆಂದು ದೂರಿದರು.
**ಕ್ರಮ**:- ಸಭಾಧ್ಯಕ್ಷರು ಮಾಣಿಕ್ಯನಹಳ್ಳಿ ಶಾಖಾಧಿಕಾರಿಗಳಿಗೆ ಮಧ್ಯಂತರ ಕಂಬ ಹಾಕುವುದಕ್ಕೆ ಅಂದಾಜು ಪಟ್ಟಿ ಸಲ್ಲಿಸುವಂತೆ ಸೂಚಿಸಿದರು.

**4. ಶ್ರೀ ಹೆಚ್.ಎಸ್.ಸೋಮೇಗೌಡ ಹಿರೇಮರಳಿ ಗ್ರಾಮ , ಮೊ.ಸಂಖ್ಯೆ:9742337418**

**ದೂರು**:- ಹೀರೆಮರಳಿ ಗ್ರಾಮದವರಾದ ನಾವು ನಮ್ಮ ಗ್ರಾಮದಲ್ಲಿ 16 ಕ್ಕೂ ಹೆಚ್ಚು ಅಲೇಮನೆಗಳಿದ್ದು ಅವುಗಳಿಂದ ಲಕ್ಷಾಂತರ ರೂಪಾಯಿಗಳನ್ನು ನಿಗಮಕ್ಕೆ ಪಾವತಿ ಮಾಡುತ್ತಾ ಬಂದಿದ್ದರು ನಮಗೆ ದಿನಕ್ಕೆ 16 ಗಂಟೆಯು ಸರಿಯಾಗಿ ವಿದ್ಯುತ್ ಸರಬರಾಜು ಸಿಗುತ್ತಿಲ್ಲ, ನಮಗೆ ನಿರಂತರವಾಗಿ ವಿದ್ಯುತ್ ಪೂರೈಕೆ ಮಾಡಿರೆಂದು ಕೋರಿದರು.
**ಕ್ರಮ**:- ಸಭಾಧ್ಯಕ್ಷರು ಟಿ.ಎಸ್.ಛತ್ರ ಶಾಖಾಧಿಕಾರಿಯವರಿಗೆ ತೀವ್ರವಾಗಿ ಆಕ್ಷೇಪಿಸಿ ನೀವು ಪದೇಪದೇ ಎಲ್.ಸಿ ತೆಗೆದುಕೊಳ್ಳುವುದನ್ನು ನಿಲ್ಲಿಸಿ ವಿದ್ಯುತ್ ಮಾರ್ಗಗಳ ನಿರ್ವಹಣೆಯನ್ನು ಕ್ರಮವಾಗಿ ನಿರ್ವಹಿಸಿ ಗ್ರಾಹಕರಿಗೆ ನಿರಂತರವಾಗಿ ವಿದ್ಯುತ್ ಪೂರೈಕೆ ಮಾಡುವಂತೆಯೂ ಹಾಗೂ ಹೀರೆಮರಳ್ಳಿ ಗ್ರಾಮದವರಿಗೆ ಕುಂತಿಬೆಟ್ಟ ಎನ್.ಜೆ.ವೈ ಫೀಡರ್‌ನಿಂದ ಲಿಂಕ್‌ಲೈನ್ ನಿರ್ಮಾಣ ಮಾಡಲು ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಸೂಚಿಸಿದರು.

**5. ಶ್ರೀ ಚಂದ್ರಶೇಖರ್ ಪಾಂಡವಪುರ ಟೌನ್ , ಮೊ.ಸಂಖ್ಯೆ:9448740659**

**ದೂರು**:- ಪಟ್ಟಣದಲ್ಲಿ ಆಗಾಗ್ಗೆ ವಿದ್ಯುತ್ ವ್ಯತ್ಯಯವಾಗುತ್ತಿರುವ ಬಗ್ಗೆ.
**ಕ್ರಮ**:- ಸಭಾಧ್ಯಕ್ಷರು ಸಹಾಯಕ ಇಂಜಿನಿಯರ್(ವಿ) ಗಳಾದ ಟಿ.ಎಸ್.ಛತ್ರ ಮತ್ತು ಪಟ್ಟಣ ಶಾಖೆಯವರಿಗೆ ಇನ್ನೂ ಮುಂದೆ ಅಡಚಣೆರಹಿತ ವಿದ್ಯುತ್ ನೀಡುವಂತೆ ತಾಕೀತು ಮಾಡುವುದರ ಜೊತೆಗೆ ಪಟ್ಟಣದ ಹೊರಭಾಗದಲ್ಲಿ ಮಾರ್ಗದೋಷಗಳ ತೊಂದರೆ ಸರಿಪಡಿಸುವ ವೇಳೆಯಲ್ಲಿ ಪಟ್ಟಣದ ಫೀಡರನ್ನು ಮಾರ್ಗ ಮುಕ್ತತೆಪಡೆಯದೇ ಹೊರಭಾಗದ ಜಿ.ಓ.ಎಸ್ ಗಳನ್ನು ಓಪನ್ ಮಾಡಿಕೊಂಡು ಸಿಬ್ಬಂದಿಗಳನ್ನು ಅಲ್ಲಿ ಕೂರಿಸಿ ಕೆಲಸ ಮಾಡುವ ಸ್ಥಳಗಳಲ್ಲಿ ಸೇಫ್‌ಜೋನ್ ಸೃಷ್ಟಿಸಿ ಸುರಕ್ಷತಾ ನಿಯಮಗಳನ್ನು ಪಾಲಿಸಿಕೊಂಡು ಕೆಲಸ ನಿರ್ವಹಿಸಿರೆಂದು ಸೂಚಿಸಿದರು.



Scanned by TapScanner

**6. ಶ್ರೀ ಕೃಷ್ಣೇಗೌಡ ಚಿಕ್ಕಬ್ಯಾಡರಹಳ್ಳಿ ಗ್ರಾಮ , ಮೊ.ಸಂಖ್ಯೆ:9972956974**

**ದೂರು**:- ನಮ್ಮ ಆಲೆಮನೆಗೆ ಸರಬರಾಜು ಆಗುವ ಟಿ.ಸಿ ಯಿಂದ ಐ.ಪಿ ಸೆಟ್‌ಗಳಿಗು ವಿದ್ಯುತ್ ಸರಬರಾಜು ಆಗುತ್ತಿದ್ದು ಅದನ್ನು ಬೇರ್ಪಡಿಸಿರೆಂದು ಕೋರಿದರು.
**ಕ್ರಮ**:- ಸಭಾಧ್ಯಕ್ಷರು ಪಟ್ಟಣ ಶಾಖಾಧಿಕಾರಿಯವರಿಗೆ ಐ.ಪಿ ಮತ್ತು ಐ.ಪಿ ಯೇತರ ಭಾರವನ್ನು ಪ್ರತ್ಯೇಕಿಸಲು ಅಂದಾಜು ಪಟ್ಟಿ ಸಲ್ಲಿಸುವಂತೆ ಸೂಚಿಸಿದರು.

**7. ಶ್ರೀ ಸುನೀಲ್.ಬಿ.ಸಿ ಬನಘಟ್ಟ ಗ್ರಾಮ, ಮೊ.ಸಂಖ್ಯೆ:974378045**

**ದೂರು**:- ರಂಗನಕೊಪ್ಪಲು ಗ್ರಾಮದ ಹತ್ತರ ಕಬ್ಬಿಣದ ಹಾಗೂ ಶಿಥಿಲವಾಗಿರುವ ಕಂಬಗಳನ್ನು ಬದಲಾಯಿಸಲು ಕೋರಿದರು.
**ಕ್ರಮ**:- ಸಭಾಧ್ಯಕ್ಷರು ಟಿ.ಎಸ್.ಛತ್ರ ಶಾಖಾಧಿಕಾರಿಯವರಿಗೆ ಸೂಕ್ತ ಕ್ರಮ ವಹಿಸುವಂತೆ ಸೂಚಿಸಿದರು.

**8. ಶ್ರೀ ಕೃಷ್ಣೇಗೌಡ ಕೋಡಳ್ಳಿ ಹೊಸೂರು ಗ್ರಾಮ , ಮೊ.ಸಂಖ್ಯೆ:7353732323**

**ದೂರು**:- ನಮ್ಮ ಕಬ್ಬಿನ ಗದ್ದೆಯಲ್ಲಿ ಹಾದು ಹೋಗಿರುವ ವಿದ್ಯುತ್ ಮಾರ್ಗಕ್ಕೆ ಬೆಳೆದಿರುವ ಕಬ್ಬು ತಾಕುತ್ತಿರುತ್ತದೆ, ಲೈನ್‌ಅನ್ನು ಪಕ್ಕಕ್ಕೆ ಬದಲಾಯಿಸಿಕೊಡುವಂತೆ ಕೋರಿದರು.
**ಕ್ರಮ**:- ಸಭಾಧ್ಯಕ್ಷರು ಟಿ.ಎಸ್.ಛತ್ರ ಶಾಖಾಧಿಕಾರಿಗಳಿಗೆ ಸ್ವಯಂ ನಿರ್ವಾಹಣ ಕಾಮಗಾರಿ ಯೋಜನೆಯಡಿಯಲ್ಲಿ ಅಂದಾಜು ಪಟ್ಟಿ ಸಲ್ಲಿಸುವಂತೆಯೂ ಮತ್ತು ಗ್ರಾಹಕರು ಅದಕ್ಕೆ ತಗಲುವ ವೈಚ್ಚವನ್ನು ಭರಿಸಿ ಕೆಲಸವನ್ನು ಪೂರೈಸಿಕೊಳ್ಳುವಂತೆ ಸೂಚಿಸಿದರು.

**9. ಶ್ರೀ ಪುರುಷೋತಮ್ ಪಾಂಡವಪುರ ಟೌನ್ ಮೊ.ಸಂಖ್ಯೆ:9945738696**

**ದೂರು**:- ಪೇಟೆ ಬೀದಿಯಲ್ಲಿ ವಾರಕ್ಕೆ ಮೂರು ದಿನ ಟಿ.ಸಿ ಸಿಂಗಲ್ ಆಗುತ್ತಿದ್ದು, ಇದರಿಂದ ನಮಗೆ ವಿದ್ಯುತ್ ಅಡಚಣೆಯುಂಟಾಗುತ್ತಿದೆ ಎಂದು ದೂರಿದರು.
**ಕ್ರಮ**:- ಸಭಾಧ್ಯಕ್ಷರು ಸಂಬಂಧಿಸಿದ ಶಾಖಾಧಿಕಾರಿಗಳಿಗೆ ಪ್ರಶ್ನಿಸಲಾಗಿ 100 ಕೆ.ವಿ.ಎ ಪರಿವರ್ತಕವು ಅಧಿಕ ಭಾರವನ್ನು ಹೊಂದಿರುವುದಾಗಿ ತಿಳಿಸಿದ್ದರಿಂದ, ಹೆಚ್ಚುವರಿಯಾಗಿ ಪರಿವರ್ತಕವನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ಸಲ್ಲಿಸಲು ಸೂಚಿಸಿದರು.



Scanned by TapScanner

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ
ಚಾವಿಸನಿನಿ ಸಹಾಯಕ ಕಾರ್ಯನಿರ್ವಾಹಕ
ಇಂಜಿನಿಯರ್ ಕಛೇರಿ, ಉಪವಿಭಾಗ ಪಾಂಡವಪುರ
Telephone No: 08236-255110
E-mail ID: aeeppura@gmail.com

CHAMUNDESHWARI ELECTRICITY
SUPPLY CORPORATION LIMITED
(A Government of Karnataka Undertaking)
Assistant Executive Engineer
CESC Pandavapura Sub-dvn
Web Site: www.cescmysore.org
Company Identity Number [CIN]:-U40109KA2004SGC035177

ಸಭೆಯನ್ನು ಮಧ್ಯಾಹ್ನ 1.00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

**ಪ್ರತಿಯನ್ನು ಇವರ ಅವಗಾಹನೆಗೆ ಸಲ್ಲಿಸಲಾಗಿದೆ:**

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ, ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ, ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ.
4. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಿಭಾಗ, ಪಾಂಡವಪುರ.

**ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ:**

1. ಲೆಕ್ಕಾಧಿಕಾರಿ, ಸೆಸ್ಕ್, ಪಾಂಡವಪುರ.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ವಿಭಾಗೀಯ ಕಛೇರಿ, ಪಾಂಡವಪುರ.
3. ಲೆಕ್ಕಾಧಿಕಾರಿ, ಆಂ.ಪ., ಸೆಸ್ಕ್, ಪಾಂಡವಪುರ.

**ಪ್ರತಿಯನ್ನು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ:**

೧. ಶಾಖಾಧಿಕಾರಿ, ಸೆಸ್ಕ್, ಕಾರ್ಯ ಮತ್ತು ಪಾಲನಾ ಶಾಖೆ, ಪಟ್ಟಣ (ಪಾಂಡವಪುರ) / ಟಿ.ಎಸ್. ಛತ್ರ / ಚಿನಕುರಳಿ / ಕ್ಯಾತನಹಳ್ಳಿ / ಬನ್ನಂಗಾಡಿ / ಮೇಲುಕೋಟೆ / ಮಾಣಿಕ್ಯನಹಳ್ಳಿ.
೨. ಸ‌ಇಂ(ತಾಂ) / ಮುಕ.

9/9/21

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಪಾಂಡವಪುರ ಉಪವಿಭಾಗ.



Scanned by TapScanner